Improving the Water Supply position of C.L.B. Channel in K. R. Nagar Taluk

747. Sri M. BASAVARAJU (K. R. Nagar).--

Will the Chief Minister be pleased to state :—

(*a*) whether it has come to the notice of the Government that water supply in the C.L.B. Channel is inadequate ;

(*b*) whether the Government has received any representation in this regard

(*c*) if so, the steps taken by the Government to improve the C.L.B. Channel ?

Sri D. PARAMESHVARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*) Yes.

(*b*) Yes.

(*c*) Possibility of increasing the duty under the Canal by proper resectioning of the Canal, providing controlling arrangements to the sluices in the Upper reaches, regulation of crop period and nature of crop, etc., will be examined.

ಶ್ರೀ ಎಂ. ಬಸವರಾಜ್.—ಇದರಲ್ಲಿ ನೀರು ಕಡಿಮೆ ಆಗಲಕ್ಕೆ ನಿರ್ದಿಷ್ಟ ಕಾರಣ ಏನು ಎಂದು ತಿಳಿಸುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ...ಮೇಲುಭಾಗದ ಬಂಡ್‌ನಲ್ಲಿ ಅನ್‌ಅಥರೈಸ್ಡ್ ಪಂಪುಸೆಟ್ಟುಗಳನ್ನು ಹಾಕಿ ನೀರನ್ನು ಎತ್ತುವುದರಿಂದ ನೀರು ಕಡಿಮೆ ಆಗಲಕ್ಕೆ ಕಾರಣವಾಗಿದೆ.

ಶ್ರೀ ಎಂ. ಬಸವರಾಜ್.—ಅಪ್ಪರ್ ರೀಚ್‌ನಲ್ಲಿ ಅನ್‌ಅಥರೈಸ್ಡ್ ಐ.ಪಿ. ಸೆಟ್ಟುಗಳನ್ನು ಹಾಕಿದ್ದಾರೆ ಎಂದು ಹೇಳುತ್ತೀರಿ. ಅಡಮಾನ್ ಬ್ಯಾಂಕು, ತಾಲ್ಲೂಕು ಬೋರ್ಡು, ಎನ್.ಇ.ಎಸ್. ರವೆನ್ಯೂ ಮತ್ತು ಇತರ ಇಲಾಖೆಗಳ ಸಹಾಯ ತೆಗೆದುಕೊಂಡು. ಈ ಪಂಪುಸೆಟ್ಟುಗಳನ್ನು ಇನ್‌ಸ್ಟಾಲ್ ಮಾಡಿದ್ದಾರೆ. ಆದ್ದರಿಂದ ಅದನ್ನು ಅನ್‌ಅಥರೈಸ್ಡ್ ಎಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ಅಲ್ಲಿ ಐ.ಪಿ. ಸೆಟ್ಟುಗಳನ್ನು ಇಡುವುದಕ್ಕೆ ಅವಕಾಶ ಕೊಟ್ಟು ಟೇಲ್ ಎಂಡಿನಲ್ಲಿ ಹೆಚ್ಚುವರಿ ನೀರು ದೊರಕುವಂತೆ, ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಪಂಪುಸೆಟ್ಟು ತೆಗೆದುಕೊಂಡು ಡಿಪಾರ್ಟ್‌ಮೆಂಟಿನ ಅನುಮತಿ ಇಲ್ಲದೆ ನೀರು ಎತ್ತುವುದಾದರೆ, ಅದು ಅನ್‌ಅಥರೈಸ್ಡ್ ಲಫ್ಟ್ ಇರಿಗೇಶನ್ ಆಗುತ್ತದೆ. ಟೇಲ್ ಎಂಡಿನಲ್ಲಿ ನೀರು ಹೋಗುವುದು ಬಹಳ ಕಡಿಮೆ ಆಗಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಇಂತಹ ಅನ್‌ಅಥರೈಡ್ಡ್ ಪಂಪು ಸೆಟ್ಟುಗಳನ್ನು ತೆಗೆಸುವುದಕ್ಕೆ ಸಕಲ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಬಸವರಾಜ್.—ಈ ಐ.ಪಿ. ಸೆಟ್ಟುಗಳಮೇಲೆ ಎರಕ್ಕೈಸಿಟಿ ಬೋರ್ಡಿನವರು 17ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಆದ್ದರಿಂದ ಇವನ್ನೂ ಕಿತ್ತು ಹಾಕಿದರೆ ರೈತರಿಗೆ ನಷ್ಟವಾಗುವುದು ಅಲ್ಲದೆ ದೇಶಕ್ಕೆ ಆಗತಕ್ಕ ಆಹಾರದ ಶೇಖರಣೆ ಕಡಿಮೆಯಾಗುತ್ತದೆ. ಆದ್ದರಿಂದ ಐ.ಪಿ. ಸೆಟ್ಟುಗಳನ್ನು ಉಳಿಸಿಕೊಂಡು ಟೇಲ್ ಎಂಡಿನಲ್ಲಿ ನೀರು ಸರಿಯಾಗಿ ಸರಬರಾಯಿ ಆಗಲು, ಅಲ್ಲಿ ಚಾನಲ್ ಇಂಪ್ರೂವ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ದೊಡ್ಡಬೋರೆಗೌಡ —ಮೈನ್ ಚಾನಲ್ಲುಗಳಿಗೆ ಅನೇಕ ಕಡೆ ಐ.ಪಿ. ಸೆಟ್ಟುಗಳನ್ನು ಮತ್ತು ಡೀಸೆಲ್ ಸೆಟ್ಟುಗಳನ್ನು ಸರ್ಕಾರದ ಅನುಮತಿ ಇಲ್ಲದೆ ಹಾಕಿರುವುದರಿಂದ ಟೇಲ್ ಎಂಡಿ

ನಲ್ಲರುವ ಜಮೀನಿಗೆ ನೀರಿನ ಅಭಾವ ಬಂದಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಕೆಲವಾರು ಜನ ಅನ್‌ಅಥರೈಸ್ಡ್ ಆಗಿ ಪಂಪುಸೆಟ್ಟುಗಳನ್ನು ಹಾಕಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಇಷ್ಟೇ ಸಂಖ್ಯೆಯಲ್ಲಿ ನಿರ್ದಿಷ್ಟವಾಗಿ ಪಂಪುಸೆಟ್ಟುಗಳನ್ನು ಹಾಕಿದ್ದಾರೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಮುಂಡ್ಯ ಡೆಪ್ಯೂಟಿ ಕಮಿಶನರಿಂದ ಇದರ ಬಗ್ಗೆ ಸರ್ಕಾರಕ್ಕೆ ವರದಿ ಕೂಡ ಬಂದಿದೆ.

ಶ್ರೀ ಡಿ. ಪರಮೇಶ್ವರಪ್ಪ.—ಅದು ನನ್ನ ಮುಂದೆ ಇಲ್ಲ. ಅನ್‌ಅಥರೈಸ್ಡ್ ಪಂಪುಸೆಟ್ಟುಗಳನ್ನು ತೆಗೆಸಿಹಾಕುವ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅವನ್ನು ತ್ವರಿತವಾಗಿ ತೆಗೆದುಹಾಕಬೇಕು ಎನ್ನುವ ಬಗ್ಗೆ ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಅನ್‌ಅಥರೈಸ್ಡ್ ಪಂಪು ಸೆಟ್ಟುಗಳು ಎಂದರೆ, ಇದನ್ನು ಗ್ರೊ ಮೋರ್ ಫುಡ್ ಕ್ಯಾಂಪೇನ್ ಮಾಡುವ ಕಾಲದಲ್ಲಿ ತಂದುದಲ್ಲವೇ ? ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ಸಹಾಯ ಮಾಡುತ್ತಿರುವ ರೈತರಿಗೆ ಇದು ಮಿಸ್‌ಲೀಡ್ ಮಾಡಿದಂತಾಗುತ್ತದೆಯಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸ್ನೇಹಿತರಲ್ಲಿ ಒಂದು ಪಾಯಿಂಟನ್ನು ನಾನು ಕ್ಲಿಯರು ಮಾಡಬೇಕಾಗಿದೆ. ರಿನರ್ವಾಯರುಗಳಲ್ಲಿ ಎಕ್ಸೆಸ್ ವಾಟರು ಇದ್ದರೆ ಕೆಲವು ಕಡೆ ಇದನ್ನು ರೈತರು ತೆಗೆದುಕೊಳ್ಳಲು ಪರ್ಮಿಷನ್ ಕೊಡಲಾಗುತ್ತಿದೆ. ಉದಾಹರಣೆಯಾಗಿ ನಾವು ಹಿರಿಯೂರಿನಲ್ಲರುವ ವಾಣೀವಿಲಾಸ ಸಾಗರದಿಂದ ನೀರನ್ನು ಸ್ವಲ್ಪ ತೆಗೆದುಕೊಳ್ಳಬಹುದು ಎಂದು 1937ರಲ್ಲಿ ಪರ್ಮಿಷನ್ ಕೊಡಲಾಯಿತು. ಇದು ಹೆಚ್ಚು ಆಹಾರದ ಉತ್ಪಾದನೆ ಮಾಡುವ ಸಲುವಾಗಿ ಮಾಡಿದುದು. ಇದರಂತೆ ಕೆಲವರು ಪಂಪುಸೆಟ್ಟುಗಳನ್ನು ಹಾಕಲು ಅನುಕೂಲವಾಯಿತು. ಆದರೆ ಯಾವ ಪರ್ಮಿಷನ್ ಇಲ್ಲದೆಯೇ ಬೇರೆ ಕಡೆಗಳಲ್ಲಿ ಪಂಪು ಸೆಟ್ಟುಗಳನ್ನು ಹಾಕಲು ಆರಂಭ ಮಾಡಿದರು. ಇದನ್ನು ನರಿಯಲ್ಲ ಎಂದು ಹೇಳಿದೆವು.

ಶ್ರೀ ಎಲ್. ಶ್ರೀಕಂಠಯ್ಯ.—ಪರ್ಮಿಷನ್ ಕೊಡುವವರು ಯಾರು ? ಹಾಗೆ ಪರ್ಮಿಷನ್ ಕೊಟ್ಟಿರುವುದನ್ನು ವಾಪಸು ಕಿತ್ತುಕೊಳ್ಳುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಪರ್ಮಿಷನ್ ಡೆಪ್ಯೂಟಿ ಕಮಿಷನರ್‌ರವರು ಕೊಡುತ್ತಾರೆ. ಪರ್ಮಿಷ್ ಕೊಟ್ಟಿರುವುದನ್ನು ಕಿತ್ತುಕೊಳ್ಳುತ್ತಿಲ್ಲ. ಪರ್ಮಿಷ್ ಇಲ್ಲದೇ ಕೆಲವರು ಮಾಡುತ್ತಿದ್ದಾರೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಟೇಲ್‌ಎಂಡ್ ರ್ಯಾಂಡ್ಸ್‌ಗಳಿಗೆ ನೀರು ಕೊಟ್ಟರೆ ಅನುಕೂಲವಾಗುತ್ತದೆ. ಇದರಿಂದ ಬಡವರಿಗೂ ಅನುಕೂಲ ಮಾಡಿದಂತಾಗುತ್ತದೆ ಎನ್ನುವುದು ಸರ್ಕಾರದ ಧೋರಣೆಯಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಇದನ್ನು ಒಪ್ಪುತ್ತೇನೆ. ಇದರಿಂದ ರೈತರಿಗೂ ಅನುಕೂಲವಾಗುತ್ತದೆ. ಆದರೆ ಕೆಲವು ಕಡೆ ನಾವು ಕೊಟ್ಟರೆ ಇದು ಡಿಸ್‌ಕ್ರಿಮಿನೇಷನ್ ಆಗುತ್ತದೆ ಇದರಿಂದ ಇಂತಹ ಕಡೆಗಳಲ್ಲಿ ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ಜಿ. ರಾಮೇಗೌಡ.—ನಾಲಾಗಳಿಂದ ನೀರು ತೆಗೆದುಕೊಳ್ಳುವುದೇ ಅಲ್ಲದೆ ಕೆಲವು ಕಡೆ ಇರುವ ಕೆರೆಗಳ ತೂಬುಗಳ ಬಳಿ ಪಂಪುಸೆಟ್ಟುಗಳನ್ನು ಹಾಕಿಕೊಂಡು ನೀರು ಉಪಯೋಗಿಸುತ್ತಿದ್ದಾರೆ. ಇದಕ್ಕೆ ಡೆಪ್ಯೂಟಿ ಕಮಿಷನರವರು ಪರ್ಮಿಷನ್ ಕೊಡದೇ ಇದ್ದರೆ ಏನು ಮಾಡುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಇಂತಹ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ. ಇಂತಹ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎನ್. ಪಾಟೀಲ್.—ಹೊಸದಾಗಿ ಪಂಪುಸೆಟ್ಟುಗಳ ಬಗ್ಗೆ ಅಲ್ಲ. ಇಲ್ಲರುವ ಪಂಪು ಸೆಟ್ಟುಗಳನ್ನು ಹಾಕಲು ಪರ್ಮಿಷನ್ ಕೊಟ್ಟು ಲೀಗಲೈಸ್ ಆಗಿರುವುದನ್ನು ಸರಿಪಡಿಸುತ್ತೇವೆ ಎಂದು ಇಲ್ಲಿ ಅಷ್ಯೂರೆನ್ಸ್ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಲೇಗಲೈಸ್ ಆಗಿದ್ದರೆ ಇದನ್ನು ಕನ್‌ಸಿಡರು ಮಾಡಬೇಕಾಗುತ್ತದೆ.

ಶ್ರೀ ಬೋಳಾ ರಘುರಾಮಯ್ಯ ಶೆಟ್ಟಿ.—ಇದರಲ್ಲಿ ಲೈನನ್ಸ್ ಕೊಡುವಾಗ ಬಹಳ ವಿಳಂಬವಾಗುತ್ತಿರುವುದರಿಂದ ಇದನ್ನೂ ಅನ್-ಅಥರೈಸ್ಡ್ ಎಂದು ಒಪ್ಪದೇ ಇರಲು ಒಂದು ಕಾರಣವಾಗುತ್ತದಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಇದನ್ನು ಒಪ್ಪುವುದಿಲ್ಲ.

Conversion of Relief Road from Valloor to Venkatammanahalli to P. W. D. Road

768. Sri P. ANJANAPPA (Pavagada).—

Will the Minister for Public Works be pleased to state :—

(*a*) the action taken to convert the relief road from Valloor to Venkatammanahalli (up to Andhra border) to P.W.D. road ;

(*b*) the action taken to convert the relief road from Dommthamari to Gummagatta ;

(*c*) the action taken to convert the road Thimmaya Kavapadi *Via.*, Sreerangapura to Nagalamadike, into P.W.D. road ?

(*d*) the stage of conversion of relief road from Sreerangapura *Via.*, Gyadigunte to Pendlijeevi into P.W.D. Road ?

Sri BASAVARAJA MAGAVI (Deputy Minister for Public Works).—

(*a*) This will be considered, at the appropriate time.

(*b*) to (*d*) There are no such proposals under consideration of Government.

ಶ್ರೀ ಪಿ. ಆಂಜನಪ್ಪ.—ಉತ್ತರದಲ್ಲಿ ಯಾವ ಸಲಹೆಗಳನ್ನೂ ಪರಿಶೀಲನೆಯಾಗುವುದಿಲ್ಲ ಎಂದು ಹೇಳಿದರೆ ಪಿ.ಡಬ್ಲ್ಯು.ಡಿ. ನರ್‌ಕ್ಯುಲರುಪ್ರಕಾರ ಕೆಲವು ರಸ್ತೆಗಳನ್ನು ಇಲಾಖೆಯವರೇ ತೆಗೆದುಕೊಳ್ಳಬೇಕೆಂದು ಇರಲಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ವಲ್ಲೂರಿನಿಂದ ವೆಂಕಟಮ್ಮನಹಳ್ಳಿವರೆಗೆ ಇರುವ ರಸ್ತೆ ಅಂದ್ರದ ಗಡಿಯವರೆಗೆ ಹೋಗುತ್ತಿರುವುದರಿಂದ ಇದನ್ನು ಮೊದಲು ತೆಗೆದುಕೊಳ್ಳಬೇಕೆಂದು ವೇಟಿಂಗು ಲಸ್ಟ್‌ನಲ್ಲಿ ಇಟ್ಟುಕೊಳ್ಳಲಾಗಿದೆ. ಉಳಿದ ಎಲ್ಲ ರಸ್ತೆಗಳನ್ನೂ ತಾಲ್ಲೂಕು ಡೆವಲಪ್‌ಮೆಂಟು ಬೋರ್ಡಿನವರೇ ಮಾಡಬೇಕು ಎನ್ನುವುದು ಸರಕಾರದ ಉದ್ದೇಶವಾಗಿದೆ.

ಶ್ರೀ ಜೆ. ಆರ್ ಹಾಲಸ್ವಾಮಿ.—ಹಿಂದೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಬಂದಾಗ ಆಯಾ ಸದಸ್ಯರುಗಳ ಕ್ಷೇತ್ರದಲ್ಲಿರುವ ರಸ್ತೆಗಳ ಒಂದು ಪಟ್ಟಿಯನ್ನು ಕೊಟ್ಟಿದ್ದರು ಅದರಂತೆ ಲೋಕೋಪಯೋಗಿ ಇಲಾಖೆಯವರು ಹೋದ ಸಾರಿ ಮಾಡಿದ್ದರು ಇದನ್ನೇ ಈ ಸಾಲಿನಲ್ಲೂ ಮುಂದುವರಿಸುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಅನೇಕ ಸಾರಿ ಈ ಮಾನ್ಯ ಸಭೆಗೆ ತಿಳಿಸಿದಂತೆ ಪಿ.ಡಬ್ಲ್ಯು.ಡಿ. ಇಲಾಖೆಯವರು 15 ಸಾವಿರ ಮೈಲಿಗಳಷ್ಟು ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಎಲ್ಲ ಸದಸ್ಯರುಗಳೂ ಕೊಟ್ಟ ಪಟ್ಟಿಯಂತೆ ತೆಗೆದುಕೊಂಡಿದ್ದರೂ ಇನ್ನೂ ಎಲ್ಲ ರಸ್ತೆಗಳನ್ನೂ ಸುವ್ಯಸ್ಥೆಯಿಂದ ಇಡಲು ಸಾಧ್ಯವಾಗಿಲ್ಲ. ಆದುದರಿಂದ ಇನ್ನು ಹೊಸ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ಭಾವನೆ ಸರಕಾರಕ್ಕಿಲ್ಲ. ಎರಡನೆಯದು ಹೊಸ ಸರಕಾರದ ನೀತಿಯ ಪ್ರಕಾರ ಇನ್ನು ಮುಂದೆ